ನ್ಯಾಚುರಲ್ ವಾಟರ್ ಸಪ್ಲೈಗೆ ಟ್ಯಾಂಕ್ ಕಟ್ಟಿ ಪೈಪ್ ಮೂಲಕ ಡ್ರಿಂಕಿಂಗ್ ವಾಟರ್ ಯೋಜನೆ ಮಾಡಲಿಕ್ಕೆ ಇವರು ಹಣವನ್ನು ಬಿಡುಗಡೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಗ್ರಾಮಾಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಸದಸ್ಯರು ಹೇಳಿದ ಹಾಗೆ ಮೂಡಿಗೆರೆಯಲ್ಲಿರತಕ್ಕಂಥ ಸಮಸ್ಯೆ ಮಲೆನಾಡಿನ ಎಲ್ಲಾ ಹಳ್ಳಿಗಳಲ್ಲಿಯೂ ಇದೆ. 400-500 ಅಡಿ ಆಳ ಕೊಳವೆ ಬಾವಿಗಳನ್ನು ತೆಗೆದರೂ ಬೇಸಿಗೆಯಲ್ಲಿ ನೀರು ಬರುವುದಿಲ್ಲ. ವಾಟರ್ ಟೇಬಲ್ ಬಹಳ ಕೆಳಗಡೆ ಹೋಗುತ್ತಿದೆ. ಅದರಿಂದ ಅದಕ್ಕೆ ಬದಲಾಗಿ ಶಾಶ್ವತವಾಗಿ ಹರಿಯುತ್ತಿರತಕ್ಕಂಥ ಹಳ್ಳಕೊಳ್ಳಗಳು ಬಹಳ ಇವೆ. ಅವುಗಳಲ್ಲಿ ನೀರು ಶೇಖರಣೆ ಮಾಡಿ ಈ ಗ್ರಾಮಗಳಿಗೆ ನೀರು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಹಣಕಾಸಿನ ಬಗ್ಗೆ ಮುಖ್ಯಕಾರ್ಯದರ್ಶಿಗಳನ್ನು ಕರೆಯಿಸಿ ಅಲ್ಲಿನ ಅವಶ್ಯಕತೆಗಳನ್ನು ನೋಡಿ, ಮಾಡುತ್ತೇವೆ. ಈಗ ಕೊಟ್ಟಿರುವ ಹಣ ಸಾಲದೇ ಹೋದರೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಸ್ಕೇರ್‌ಸಿಟಿಯಲ್ಲಿ ಡ್ರಿಂಕಿಂಗ್‌ವಾಟರ್‌ಗೆ ಇವರು ಸ್ಪೆಷಲ್ಲಾಗಿ ಹಣವನ್ನು ಬಿಡುಗಡೆ ಮಾಡಿಲ್ಲ. ಏಕೆಂದರೆ ನಮ್ಮ ಜಿಲ್ಲಾಪರಿಷತ್ತಿನಲ್ಲಿ ಹಣ ಇಲ್ಲ. ಮರು ಹೊಂದಾಣಿಕೆಗೆ ಈ ಒಂದು ಇಲಾಖೆ ಏನೊಂದು ಪ್ರಸ್ತಾವನೆ ಕಳಿಸಿ ಅದಕ್ಕೆ ಈವರೆಗೆ ಅನುಮತಿ ನೀಡಿಲ್ಲ. ಆದ್ದರಿಂದ ಎನ್.ಆರ್.ಡಬ್ಲೂ. ಸ್ಕೀಮ್ ಸೋರ್ಸ್ ಡ್ರೈ ಆಪ್ ಆಗಿದೆ. ಅದಕ್ಕೆ ಓಪನ್‌ವೆಲ್ ನಾಲ್ಕು ಕಡೆ ಕೂಡಲೇ ಮಾಡಬೇಕಾಗುತ್ತದೆ. ನಾಲ್ಕು ಕಡೆ ಎಂದರೆ 50,000 / ನಂತೆ ಲೆಕ್ಕ ಹಾಕಿ ಕೂಡಲೇ ಹಣವನ್ನು ಬಿಡುಗಡೆ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

<u>ವಿಷಯ : ಈಜಿಪುರದಲ್ಲಿ ಸುಮಾರು 300 ಗುಡಿಸಲುಗಳು ಅಗ್ನಿಗೆ ಆಹುತಿಯಾಗಿ ಅಲ್ಲಿನ ವಾಸಿಗಳು ನೆಲೆ ಕಳೆದುಕೊಂಡು ತೊಂದರೆಯಾಗಿರುವ ಬಗ್ಗೆ.</u>

ಶ್ರೀ ಎಸ್.ರಮೇಶ್ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಈಜಿಪುರದಲ್ಲಿ 300 ಗುಡಿಸಲುಗಳು ಅಗ್ನಿಗೆ ಆಹುತಿಯಾಗಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) (ಕಂದಾಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, Between the midnight of 27.1.1993 and on the early hours of 28.1.1993, fire broke-out accidentally which gutted as many as 227 huts out of 396 huts situated in Sy. No. 102 to 105 of Kormangala near Ejipura Village, Bangalore South Taluk.

Out of those, 210 huts were fully and 17 huts were partially burnt. It is verified that the affected members of the family are labourers and belong to backward section of the society. However, there were no casualities to the human lives or live stock. The loss suffered by individual affected families is estimated to be ranging from Rs. 2,000/- to Rs. 5,000/-

and the total loss estimated is about Rs. 6.00 lakhs.

As a measure of immediate relief and rehabilitation, breakfast and food was provided to 1,000 persons on 28th and 29th January 1993. A cash relief of Rs. 500/- each to 210 fully affected families at Rs. 300/- each to 7 partially affected families and a sum of Rs. 200/- each to 10 families is provided by the Deputy Commissioner, Bangalore (Urban) district.

In addition to the cash payment, house hold articles such as wick-stove, plates, tumblers and clothes, bed-sheets and food grains were distributed to the fire victims.

Further, temporary electrical lighting arrangements, drinking water, medical aid and security arrangements have also been provided with the co-orporation and assistance from Bangalore City corporation and other departments.

The victims were rehabilitated temporarily by providing shamianas in the nearby vacant land. The Hon'ble Chief Minister had also visited the spot on 28.1.1993 and heard the grievances of the victims.

The victims are eligible for a maximum cash relieg of Rs. 1,750/- each depending upon the loss sustained by them and the Deputy Commissioner, Bangalore would be pay balance of relief.

Since the victims were living in the huts put-up un-authorisedly on the land acquired by the Corporation during 1941 and handed over to P.W.D.to construct the quarters for officers of Judicial and other departments, It is proposed to rehabilitate them under 'Ashraya' Scheme.

So far a sum of Rs. 3.50 lakhs has been spent as immediate relief in the form of cash and kind out of the 'Calamity Relief Fund ' and Taluk Development Board.

* ಶ್ರೀ ಎಸ್. ರಮೇಶ್ : ಮಾನ್ಯ ಅಧ್ಯಕ್ಷರೆ, ಈ ಗುಡಿಸಲು ನಿವಾಸಿಗಳು ಸುಮಾರು 20-25 ವರ್ಷಗಳಿಂದ ಆ ಜಾಗದಲ್ಲಿ ವಾಸವಾಗಿದ್ದರು. ಅನೇಕ ಸಂದರ್ಭಗಳಲ್ಲಿ ಅನೇಕ ಚುನಾವಣೆಗಳಲ್ಲಿ ಅಲ್ಲಿದ್ದಂಥ ಜನರು ಮತ ಚಲಾಯಿಸಿದ್ದಾರೆ. ಆ ಸ್ಥಳಕ್ಕೆ ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಕೂಡ ಜನರೆಲ್ಲಾ ಅಲ್ಲೇ ಇರುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದರು. ಅವರು ಕೂಲಿ ಮಾಡತಕ್ಕಂಥ ಜನರೆಂದು ತಾವೇ ತಮ್ಮ ಉತ್ತರದಲ್ಲಿ ಒಪ್ಪಿಕೊಂಡಿದ್ದೀರಿ. ಇವರಿಗೆ ನೀವು ಬೆಂಗಳೂರಿನಿಂದ 30-40 ಕಿಲೋಮೀಟರುಗಳಾದ ಜಾಗ ಕೊಟ್ಟರೆ ಇವರು ಜೀವನ ನಡೆಸುವುದಾದರೂ ಹೇಗೆ? 20

ವರ್ಷಗಳಿಂದ ಒಂದೇ ಸ್ಥಳದಲ್ಲಿ ವಾಸವಾಗಿದ್ದಂಥವರನ್ನು ರಾತ್ರೋ ರಾತ್ರಿ ಹೊರಗಡೆ ಹೋಗಿ ಎಂದರೆ ಏನರ್ಥ? 27 ನೇ ತಾರೀಖು ಜನವರಿಯಲ್ಲಿ ಆಕಸ್ಮಿಕವಾಗಿ ಗುಡಿಸಲುಗಳಿಗೆ ಬೆಂಕಿ ತಗುಲಿ ಗುಡಿಸಲುಗಳೆಲ್ಲಾ ಭಸ್ಮವಾದುವು. ನೀವು ಆವೊತ್ತು ಅಲ್ಲಿಗೆ ಹೋಗಿ ಗುಡಿಸಲು ನಿವಾಸಿಗಳಿಗೆ ಊಟ ಕೊಟ್ಟಿರಿ. ಮತ್ತು ನನ್ನ ಮಿತ್ರರಾದಂಥ ಡಾ : ಪ್ರೇಮಚಂದ್ರ ಸಾಗರ್‌ರವರು ಕೂಡ ಹೋಗಿ 'ನೀವುಗಳೆಲ್ಲರೂ ಇಲ್ಲೇ ನೆಲೆಸುವುದಕ್ಕೆ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಡುತ್ತೇವೆ' ಎಂದೆಲ್ಲಾ ಹೇಳಿ ಬಂದರು. ಅವರಿಗೆ ಮನೆ ಕಟ್ಟಿಕೊಳ್ಳಲು ಹೆಂಚು ಕೊಟ್ಟಿಲ್ಲ, ಗುಡಿಸಲು ಕಟ್ಟಲು ಗರಿಗಳನ್ನು ಕೊಟ್ಟಿಲ್ಲ, ಅಲ್ಲೊಂದು ಶಾಮಿಯಾನ ಹಾಕಿದ್ದೀರಿ. ಆ ಸ್ಥಳಗಳಲ್ಲಿ ಹಾವು, ಹುಳಗಳ ಹಾವಳಿ ವಿಪರೀತವಾಗಿವೆ.ಮೊನ್ನೆ ಎರಡು ದಿವಸಗಳ ಕಾಲ ಮಳೆ ಬಂತು. ಅವರ ಸ್ಥಿತಿಯಂತೂ ನೋಡುವುದಕ್ಕಾಗುವುದಿಲ್ಲ. ಅವರು ತಾತ್ಕಾಲಿಕವಾಗಿಯಾದರೂ ಅಲ್ಲಿರುವುದಕ್ಕೆ ಅವಕಾಶ ಮಾಡಿಕೊಟ್ಟು, ಸಂಬಂಧಪಟ್ಟ ಕ್ಷೇತ್ರದ ಶಾಸಕರು, ರೆವಿನ್ಯೂ ಅಧಿಕಾರಿಗಳು ಏನಿದ್ದಾರೆ, ಅವರುಗಳ ಸಭೆ ಮಾಡಿ, ಆ ಸಭೆಯಲ್ಲಿ ಇದರ ಬಗ್ಗೆ ಸರಿಯಾದಂಥ ತೀರ್ಮಾನ ತೆಗೆದುಕೊಂಡು ಅಲ್ಲಿನ ಜನರು ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಮಾಡಿಕೊಡೋಣ. 'ಬೆಂಕಿ ಬಿದ್ದ ಸ್ಥಳಕ್ಕೆ ಡಾಕ್ಟರನ್ನು ಕಳುಹಿಸಿದ್ದೇವೆ, ಊಟ ಕೊಡುತ್ತೇವೆ, ಬಟ್ಟೆ -ಬರೆ ಕೊಡುತ್ತೇವೆ, ' ಎಂದರೆ ಏನು ಅರ್ಥ? ಇವೊತ್ತು ನಾವು ಇಲ್ಲಿಗೆ ಬಂದಿರುವುದು ಆ ಬಡ ಜನತೆಯಿಂದ. ಅವರು ರಸ್ತೆಯಲ್ಲಿದ್ದಾಗ ನಾವು ಇಲ್ಲಿ ನೆಮ್ಮದಿಯಿಂದ ಕುಳಿತು ಜೀವನ ಮಾಡುವುದಕ್ಕೆ ಸಾಧ್ಯವೇ? ಆದುದರಿಂದ, ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಜಿಲ್ಲಾಧಿಕಾರಿಯವರಿಗೆ ಕೂಡಲೇ ಹೇಳಿ ಅವರಿಗೆ ಮನೆ ಕಟ್ಟಿಕೊಳ್ಳಲು ಹೆಂಚು, ಗರಿ, ಮರ-ಮುಟ್ಟುಗಳು, ಇತ್ಯಾದಿ ಏನೇನು ಕೊಡಬೇಕೋ ಅವುಗಳನ್ನು ಪೂರೈಸಿ ನಂತರ ಅವರನ್ನು ಆಶ್ರಯ ಯೋಜನೋಯಡಿಯಲ್ಲಿ ಯಾವ ರೀತಿ ಮನೆಗಳನ್ನು ಕಲ್ಪಿಸಬಹುದೆಂಬ ಬಗ್ಗೆ ನಾವು - ನೀವು ಕುಳಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳೋಣ. ಆ ದಿನ ನಾನು ಬೆಳಿಗ್ಗೆ 7 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂಬಂಧವಾಗಿ ದೂರವಾಣಿ ಕರೆ ಮಾಡಿದಾಗ 'ನಾನು ಹೋಗುವುದಕ್ಕಾಗುವುದಿಲ್ಲ, ನೀವು ಹೋಗಿ ಬನ್ನಿ,ಇದರ ಬಗ್ಗೆ ನಾನು ಸಂಬಂಪಟ್ಟಅಧಿಕಾರಿಗಳಿಗೆ ತಿಳಿಸುತ್ತೇನೆ ' ಎಂದು ಹೇಳಿದರು. ಅಲ್ಲದೆ, ಆವೊತ್ತು 4.30 ಗಂಟೆಗೆ ನನಗೂ ತಿಳಿಸದೆ ಮುಖ್ಯಮಂತಿಗಳು ಸ್ಥಳಕ್ಕೆ ಹೋಗಿ ಬಂದರು. ಅಲ್ಲಿಂದ ಇಲ್ಲಿಯವರೆಗೆ ಏನೇನು ಮಾಡಿದ್ದೀರಿ ಎಂಬುದರ ಬಗ್ಗೆ ಇವೊತ್ತಿನವರೆವಿಗೂ ನನ್ನನ್ನು ಏನಾದರೂ ಕರೆಹು ಒಂದು ಮಾತು ಹೇಳಿದ್ದೀರಾ? ಅಥವಾ ಸಂಬಂಧ ಪಟ್ಟ ಅಧಿಕಾರಿಗಳಿಗೆ ' ಅಲ್ಲಿ ಏನು ನಡೆದಿದೆ ನೋಡಿಕೊಂಡು ಬಂದು ಹೇಳಿ' ಎಂದಾದರೂ ಹೇಳಿದ್ದೀರಾ? ಏಕೆ ಈ ಮಲತಾಯಿ ಧೋರಣೆ? ಇದರಲ್ಲಿ ರಾಜಕೀಯ ಪಿತೂರಿ ಇದೆಯೇ ಎಂದು ನಾನು ಹೇಳಬೇಕಾಗುತ್ತದೆ. ಅಥವಾ 'ಇದು ರಮೇಶರವರ ಕ್ಷೇತ್ರ, ಅಲ್ಲಿ ಬಡವರೇ ಸಾಕಷ್ಟಿರುವುದು, ನಾವು ಬಡವರಿಗೆ ಸಹಾಯ ಮಾಡಿದರೆ ರಮೇಶರವರಿಗೆ ಬೆಂಬಲ ಕೊಟ್ಟಂತಾಗುತ್ತದೆ ' ಎನ್ನುವ ದುರುದ್ದೇಶ ನಿಮ್ಮಲ್ಲಿದ್ದರೆ ಅದನ್ನಾದರೂ ಸ್ಪಷ್ಟಪಡಿಸಿ. ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುವುದಿಷ್ಟೆ : ಇದರಲ್ಲಿ ರಾಜಕೀಯ ಬೇಡ, ನಿರ್ಗತಿಕ ಬಡ ಜನರು ರಸ್ತೆಯಲ್ಲಿದ್ದಾರೆ, ಅವರು ಆದಷ್ಟು ಬೇಗ ನೆಮ್ಮದಿ ಜೀವನ ನಡೆಸಲು ಅವಕಾಶ ಮಾಡಿಕೊಡಿ. ಅಲ್ಲಿದ್ದವರನ್ನು ರಾತ್ರೊರಾತ್ರಿ ನೀವು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ನಾವುಗಳೆಲ್ಲರೂ ಚುನಾವಣಾ ಸಮಯಲ್ಲಿ ಏನೇನು ಹೇಳಬೇಕೋ ಅವೆಲ್ಲವನ್ನು ಹೇಳಿಯೇ ಇಲ್ಲಿಗೆ ಬಂದಿರುವುದು. ಬೆಂಕಿ ಅನಾಹುತಕ್ಕೆ ಸಿಲಕಿ ತಮ್ಮ ಗುಡಿಸಲುಗಳನ್ನು ಕಳೆದುಕೊಂಡಂಥ ಜನರ ಜೀವನವನ್ನು ರಾಜಕೀಯ ದುರುದ್ದೇಶದಿಂದ ಹಾಳು ಮಾಡುವುದು ಬೇಡ. ಮಾನ್ಯ ಮುಖಮಂತ್ರಿಗಳು ಸದನದಲ್ಲಿರುವುದರಿಂದ ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ : ಆದಷ್ಟು ಬೇಗ ಅವರಿಗೆ ಏನೇನು ಸೌಕರ್ಯ-ಸವಲತ್ತುಗಳು ಬೇಕೋ ಅವುಗಳನ್ನೆಲ್ಲಾ ಪೂರೈಸಿ ಕೊಡಿ. ಹಾಗೇಯೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆಯಿರಿ. ಆ ಸಭೆಯಲ್ಲಿ ಇದರ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಹಾರನಹಳ್ಳಿ ರಾವಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇದೊಂದು ಮಾನವೀಯ ಪ್ರಶ್ನೆಯಾಗಿದ್ದು, ಆ ದೃಷ್ಟಿಯಿಟ್ಟುಕೊಂಡು ತೊಂದರೆಯನ್ನು ಬಗೆಹರಿಸಬೇಕಾಗಿದೆ. ಈ ವಿಷಯದಲ್ಲಿ ರಾಜಕೀಯ ಏನೂ ಇಲ್ಲ. ಮಾನ್ಯ ಕಂದಾಯ ಮಂತ್ರಿಗಳು ಮಾನ್ಯ ಸದಸ್ಯರನ್ನು ಕರೆಯಿಸಿ ಅದರ ಬಗ್ಗೆ ಮಾತನಾಡಿ ಏನು ಮಾಡಬೇಕೆಂಬುದರ ಯೋಜನೆ ಮಾಡುತ್ತಾರೆಂದು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಎಸ್. ರಮೇಶ್ : ಈ ಮಳೆ ಬರುವ ಕಾಲವಲ್ಲ, ನಿನ್ನೆ ತಾನೇ 4 ಜನರನ್ನು ಆಸ್ಪತ್ರೆಗೆ ಸೇರಿಸಿದ್ದೇವೆ. ಅವರಿಗೆ ತಾತ್ಕಾಲಿಕವಾಗಿ ಈಗ ಇರಲು ವ್ಯವಸ್ಥೆ ಮಾಡಿಕೊಡಿ. ನಾವು ಸಭೆ ಮಾಡೋಣ. ಚರ್ಚೆ ಮಾಡೋಣ. ಅದರ ಬಗ್ಗೆ ತೀರ್ಮಾನ ತಗೆದುಕೊಳ್ಳೋಣ. ಅಲ್ಲಿ ಇರತಕ್ಕ ಗುಡಿಸಲುಗಳಲ್ಲಿ ಮೂರು ಲಕ್ಷ ಜನರು ವಾಸವಾಗಿದ್ದಾರೆ, ಇದು ಕೋರಮಂಗಲ, ರಾಜೇಂದ್ರನಗರ, ಲಕ್ಷ್ಮಣರಾವ್ ನಗರ, ಭಾಗದ ಸುತ್ತಮುತ್ತಲು ಬರುತ್ತದೆ. ಅವರನ್ನು ನೀವು ತೆಗೆಯಲು ಬರುವುದಿಲ್ಲ, ಅದರ ಬಗ್ಗೆ ನಾವು ಅನಂತರ ಕುಳಿತುಕೊಂಡು ಮಾತನಾಡೋಣ, ಅವರಿಗೆ ಏನಾದರೂ ಪರಿಹಾರವನ್ನು ಕೊಡಿ, ಅವರಿಗೆ ಹೆಂಚೋ ಅಥವಾ ಮರವನ್ನೋ ಕೊಡಿ. ಅವರು ತಾತ್ಕಾಲಿಕವಾಗಿ ಅಲ್ಲಿ ಇರಲಿ. ಅನಂತರ ನಾವು ಸಭೆಯನ್ನು ಮಾಡೋಣ, ಚರ್ಚೆಯನ್ನು ಮಾಡೋಣ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಮಾನ್ಯ ಕಂದಾಯ ಮಂತ್ರಿಗಳಿಗೆ ತಿಳಿಸುತ್ತೇನೆ.

<u>ನಿಯಮ 334 ರ ಮೇರೆಗೆ ಚರ್ಚೆ.</u>

<u>ವಿಷಯ : ಪ್ರತಿ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸುವುದು.</u>

ಶ್ರೀ ಯು.ಕೆ. ಶಾಮಣ್ಣ : ಸನ್ಮಾನ್ಯ ಅಧ್ಯಕ್ಷರೇ, ಯುವಜನ ಇಲಾಖೆಯಿಂದ ಪ್ರತಿ ತಾಲ್ಲೂಕಿನಲ್ಲಿ ಒಂದು ಆಟದ ಮೈದಾನ (ಪೆವಿಲಿಯನ್) ಮಾಡಿಸುವ ಯೋಜನೆ ಇದೆಯೇ? ಈಗ ರಾಜ್ಯದಲ್ಲಿ ಎಷ್ಟು ತಾಲ್ಲೂಕಿನಲ್ಲಿ ಕ್ರೀಡಾಂಗಣವಿದೆ? ಕ್ರೀಡಾಂಗಣ ಇಲ್ಲದೆ ಇರುವ ಕಡೆ ಯಾವಾಗ ಕೊಡುತ್ತೀರಿ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಯುವ ಜನ ಮತ್ತು ಕ್ರೀಡಾ ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ನಿಯಮ 334 ರ ಅಡಿಯಲ್ಲಿ ಮಾನ್ಯ ಸದಸ್ಯರಾದ ಶಾಮಣ್ಣನವರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ರೀಡಾಂಗಣವನ್ನು ನಿರ್ಮಾಣ ಮಾಡಿಕೊಡುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಸಚಿವರು ಪರಿಶೀಲಿಸುತ್ತಾರೆ.

2. ಬೆಳಗಾಂ ತಾಲ್ಲೂಕು ಕಾಡೊಳ್ಳಿಗೆ ಆರೋಗ್ಯ ಕೇಂದ್ರ.

SRI. K. G. MODAGEKAR DESAI : Large number of people are demanding the Primary Health Centre at Kadoli Village, Belgaum Taluk, because the people of Kadoli Village and surrounding Villages having to come to Belgaum City for treatment at odd hours. The population of Kadoli Village is about 10,000 and surrounding Villages population is more than